ಗಮನ ಸೆಳೆಯಂವ ಸೂಚನೆಗಳು

ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಗೊಪ್ಪೇನಹಳ್ಳಿಯ ನಾಯಕ ಜನಾಂಗದ ಶೇಖರಪ್ಪ ಎಂಬುವರ ಕೊಲೆಯ ವಿಚಾರದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವುದು

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಗೊಪ್ಪೇನಹಳ್ಳಿಯ ನಾಯಕ ಜನಾಂಗದ ಶೇಖರಪ್ಪ ಎಂಬುವರ ಕೊಲೆಯ ವಿಚಾರದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳದೆ ಇರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ಗೃಹ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ ೯-೧೧-೧೯೮೭ ರಂದು ಬೆಳಿಗ್ಗೆ ೬-೩೧ ಗಂಟೆ ಸಮಯದಲ್ಲಿ ಚನ್ನಗಿರಿ ಪೋಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್‌ರವರಿಗೆ ಕಳ್ಳತನದ ಆರೋಪದ ಮೇಲೆ ಮಂಡಲ ಪಂಚಾಯ್ತಿ ಕಚೇರಿಯಲ್ಲಿಯೇ ಉಳಿಸಿಕೊಳ್ಳಲಾದ ಶೇಖರಪ್ಪ ಎಂಬ ವ್ಯಕ್ತಿ ನೇಣು ಹಾಕಿಕೊಂಡು ಸತ್ತ ಸಮಾಚಾರವನ್ನು ಗೊಪ್ಪೇನಹಳ್ಳಿ ಮಂಡಲ ಪ್ರಧಾನರಾದ ಶ್ರೀ ಕೆ.ಹೆಚ್. ದೇವೇಂದ್ರಪ್ಪರವರು ತಿಳಿಸಿದರು. ಸಮಾಚಾರ ಬಂದ ಕೂಡಲೇ ಚನ್ನಗಿರಿ ಪೋಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್‌ರವರು ಸ್ಥಳಕ್ಕೆ ಧಾವಿಸಿ, ದೇವೇಂದ್ರಪ್ಪನವರಿಂದ ಒಂದು ಲಿಖಿತ ದೂರನ್ನು ಪಡೆದು ಕ್ರಿಮಿನಲ್ ಪ್ರೊಸೀಜರ್ ಕೋಡ್ ಕಲಂ ೧೭೪ರ ಅಡಿಯಲ್ಲಿ ಗುನ್ನೆ ಸಂಖ್ಯೆ ೨೧/೮೭ ಅನ್ನು ಅಸ್ವಾಭಾವಿಕ ಮರಣವೆಂದು ದಾಖಲು ಮಾಡಿಕೊಂಡರು.

೨. ಈ ವಿಷಯವನ್ನು ತನಿಖೆ ಮಾಡಲಾಗಿ ಗೊಪ್ಪೇನಹಳ್ಳಿಯ ನಾಯಕ ಜನಾಂಗಕ್ಕೆ ಸೇರಿದ ರಂಗಪ್ಪ ಎಂಬುವವರ ಮಗನಾದ ಶ್ರೀ ಶೇಖರಪ್ಪ ಎಂಬುವವರು ಪೆನ್ನಸಮುದ್ರ ಹಳ್ಳಿಯ ಶಾಂತರಾಜು ಎಂಬುವವರಿಗೆ ಸೇರಿದ ಸಬ್‌ಮರ್ಸಿಬಲ್ ಪಂಪಿನ ಸ್ಟಾರ್ಟರ್ ಕದ್ದರೆಂದು ತಿಳಿಯಿತು. ಆಪಾದಿತ ದೇವೇಂದ್ರಪ್ಪನ ನಿಕಟವರ್ತಿ ಡಿ.ಬಿ. ಶಾಂತರಾಜು ಎಂಬುವವರು ಶೇಖರಪ್ಪನನ್ನು ಹುಡುಕಿಕೊಂಡು ಹೋದಾಗ ಹೊಲಲ್ಲೆರೆಯಲ್ಲಿ ಸ್ಟಾರ್ಟರ್ ಅನ್ನು ಮಾರುತ್ತಿದ್ದ ಶೇಖರಪ್ಪ ಸಿಕ್ಕಿಬಿದ್ದನು. ಶ್ರೀ ಶಾಂತರಾಜು ಅವರು ಶೇಖರಪ್ಪನನ್ನು ದಿನಾಂಕ ೮-೧೧-೧೯೮೭ರಂದು ರಾತ್ರಿ ಮಂಡಲ ಕಚೇರಿಗೆ ಕರೆದುಕೊಂಡು ಹೋಗಿ ಶ್ರೀ ದೇವೇಂದ್ರಪ್ಪನವರಿಗೆ ವಿಷಯ ತಿಳಿಸಿದರು. ಆಗ ಶ್ರೀ ಶೇಖರಪ್ಪನ ತಂದೆಯವರು ತಮ್ಮ ಮಗನನ್ನು ಹಿಂದಿರುಗಿ ಕರೆದುಕೊಂಡು ಬರುವುದಾಗಿ ಆಶ್ವಾಸನೆ ಇತ್ತು, ಮನೆಗೆ ಕರೆದುಕೊಂಡು ಹೋಗಲು ಅನುಮತಿ ಕೋರಿದರು. ಆದರೆ ಪ್ರಧಾನರು ಇದಕ್ಕೆ ಒಪ್ಪಲಿಲ್ಲ. ನಾಯಕ ಕೋಮಿಗೆ ಸೇರಿದ ಮಂಡಲ ಪಂಚಾಯ್ತಿ ಕಚೇರಿಯ ಜವಾನ ಶ್ರೀ ತಿಪ್ಪೇಶಿಯವರು ಅಂದು ರಾತ್ರಿ ಶೇಖರಪ್ಪನವರೊಡನೆ ಅಲ್ಲಿಯೇ ಮಲಗಿದ್ದರು. ತಿಪ್ಪೇಶಿಯವರು ದಿನಾಂಕ ೯-೧೧-೧೯೮೭ರ ಬೆಳಿಗ್ಗೆ ಎದ್ದಾಗ ಶೇಖರಪ್ಪ ಕಚೇರಿಯ ತೊಲೆಗೆ ನೇಣು ಹಾಕಿಕೊಂಡು ಸತ್ತಿದ್ದು ಕಾಣಬಂತು.

೩. ತನಿಖೆಯ ವೇಳೆಯಲ್ಲಿ ಸತ್ತ ಶೇಖರಪ್ಪನವರ ತಂದೆ ರಂಗಪ್ಪನವರ ದೂರಿನ ಮೇಲೆ ಚನ್ನಗಿರಿ ಪೋಲೀಸ್ ಠಾಣೆಯಲ್ಲಿ ಐಪಿಸಿ ಕಲಂ ೩೦೭, ೩೫೬ ರೆಡ್‌ವಿತ್ ಕಲಂ ೩೦ರಂತೆ ಅಪರಾಧ ಸಂಖ್ಯೆ ೩೨೭/೮೭ರಲ್ಲಿ ನೋಂದಾಯಿಸಿಕೊಂಡು ತನಿಖೆ ಮಾಡಲಾಗುತ್ತಿದೆ.

೪. ಮಂಡಲ ಪ್ರಧಾನ ಶ್ರೀ ಕೆ. ಹೆಚ್. ದೇವೇಂದ್ರಪ್ಪ, ಶ್ರೀ ಡಿ. ಸಿ. ವೀರಭದ್ರಪ್ಪ ಮತ್ತು ಡಿ.ಬಿ. ಶಾಂತರಾಜು ಇವರನ್ನು ದಿನಾಂಕ ೯-೧೧-೧೯೮೭ರಂದು ಬಂಧಿಸಿ, ಚನ್ನಗಿರಿ ಜೆ.ಎ ಎಫ್.ಸಿ. ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು ಅವರುಗಳನ್ನು ಅದೇ ದಿನ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಇನ್ನೊಬ್ಬ ಅಪರಾಧಿ ಯೋಗರಾಜು ಅವರನ್ನು ದಿನಾಂಕ ೪-೧೨-೧೯೮೭ರಂದು ಬಂಧಿಸಲಾಯಿತು.

೫. ಶೇಖರಪ್ಪನವರ ಮರಣಕ್ಕೆ ಸಂಬಂಧಿಸಿದ ಗುನ್ನೆ ಸಂಖ್ಯೆ ೨೧/೮೭ ಅನ್ನು ಮುಂದಿನ ತನಿಖೆಗಾಗಿ ಸಿ.ಓ.ಡಿ.ಗೆ ವಹಿಸಲಾಗಿದೆ. ಸಿ.ಓ.ಡಿ.ಯು ತನಿಖೆಯನ್ನು ದಿನಾಂಕ ೩೦-೧೨-೧೯೮೭ರಂದು ಪ್ರಾರಂಭಿಸಿದೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಇಲ್ಲಿ ತಾವು ದಯವಿಟ್ಟು ವಯಸ್ಸಿಗೆ ಮರ್ಯಾದೆ ಕೊಡಬೇಡಿ. ಬೇರೆ ಸದಸ್ಯರು ಮಾತನಾಡುವಾಗ ಬಹಳ ಅವಕಾಶ ಕೊಡುತ್ತೀರಿ. ಆದರೆ ನಮಗೆ ಕೊಡುವುದಿಲ್ಲ.

ಅಧ್ಯಕ್ಷರು.—ನಿಮಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ, ಉತ್ತರ ಕೊಟ್ಟಾಗಿದೆ. ನೀವು ಇದೇ ರೀತಿ ಮಾತನಾಡುತ್ತಿದ್ದರೆ ನಿಮ್ಮ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. I will ask you to withdarw from the House...Whatever you say will not be record·d.

ಶ್ರೀ ಪಂಪಾಪತಿ.—ಆಕ್ಷನ್ ತೆಗೆದುಕೊಳ್ಳಿ, ನೀವು ಆಕ್ಷನ್ ತೆಗೆದುಕೊಳ್ಳುವುದನ್ನು ನಾವು ತಡೆಯುವುದಕ್ಕೆ ಆಗುವುದಿಲ್ಲ.

(ಶ್ರೀ ಆರ್. ವೆಂಕಟರಾಮಯ್ಯ, ಶ್ರೀ ಯು. ಭೂಪತಿ ಮತ್ತು ಶ್ರೀ ಪಂಪಾಪತಿ ಅವರುಗಳು ಎದ್ದು ನಿಂತುಕೊಂಡು ಒಟ್ಟಿಗೆ ಮಾತನಾಡಲು ಪ್ರಾರಂಭಿಸಿದರು.)

(ಗೊಂದಲ)

Sri R.L. Jalappa —This cannot be tolerated.

ಅಧ್ಯಕ್ಷರು.—ಮೂರು ಜನರನ್ನೂ ಹೊರಗಡೆ ಹೋಗಿ ಎಂದು ಹೇಳಬೇಕಾಗುತ್ತದೆ. ನಾನು ಉತ್ತರ ಕೊಟ್ಟಿದ್ದೇನೆ. ನಿಮಗೆ ಏನಾದರೂ ತೊಂದರೆ ಇದ್ದರೆ ನನ್ನ ಚೇಂಬರ್‌ಗೆ ಬಂದು ನನ್ನನ್ನು ಕನ್‌ವಿನ್ಸ್ ಮಾಡಿ ಎಂದು ಹೇಳಿದ್ದೇನೆ. ಅದನ್ನು ಮಾಡಿ, ಇಲ್ಲದೇ ಹೋದರೆ ಸುಮ್ಮನೆ ಕುಳಿತುಕೊಳ್ಳಿ. ಶ್ರೀನಿವಾಸರವರೇ ತಾವು ಕೇಳಿರಿ.

ಶ್ರೀ ಯು. ಭೂಪತಿ.—ಇದು ಲಾ ಆರ್ಡರ್ ಪ್ರಾಬ್ಲಂ ಹೇಗಾಗುತ್ತದೆ ?...

ಅಧ್ಯಕ್ಷರು.—ಬೇಕಾದರೆ ಇನ್ನೊಮ್ಮೆ ಓದಿ ಹೇಳುತ್ತೇನೆ ಕೇಳಿರಿ. I will again read from this book.

> "When the Speaker withhold consent to the moving of an adjournment motion in his Chamber, it is neither obligatory to read out the motion to the House nor to give the reasons for refusing consent. After a Member is informed of the Speaker's decision withholding his consent, no question is permitted to be raised in the House either on the subject matter of the notice or the reasons for disallowance thereof. If however a Member would like to make a submission to the Speaker to reconsider his decision, he can do so either in person to the Speaker in his Chamber later during the day or by submitting a written representation to the Speakar in -depth there of. However, if the Speaker has decided on the sudmission of the Member that there are adequate gr·unds to bring up the matter before the House he would mention it or permits the Member to raise it on the following day irrespective of the fact that the notice had been given on the previous day."

So I have intimated you. ಆದುದರಿಂದ ತಾವು ಪೂರ್ವದಲ್ಲಿ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಯು. ಭೂಪತಿ.—ನಾನು ನಿನ್ನೆಯ ದಿವಸ ತಮ್ಮ ಚೇಂಬರ್‌ಗೆ ಬಂದು ಮಾತನಾಡಿದ್ದೇನೆ, ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ಬೇಕಾದಷ್ಟು ನೋಟೀಸ್ ಕೊಡುತ್ತೀರಿ, ಆದರೆ ನಾನು ಈಗಾಗಲೇ ಅದರ ಬಗ್ಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಯಂ. ಭೂಪತಿ.—ನಾನು ಕೊಟ್ಟಿರತಕ್ಕಂಥ ನೋಟೀಸ್ ಲಾ ಅಂಡ್ ಆರ್ಡರ್‌ಗೆ ಸಂಬಂಧಪಡುತ್ತದೆಯೇ ತಾವು ಹೇಳಿ.

MR. SPEAKER.—I have not allowed you to speak and whatever you speak, will be expunged.

(ಮಾನ್ಯ ಭೂಪತಿಯವರು ಮಾತನಾಡಲು ಪ್ರಾರಂಭಿಸಿದರು)

x x x

MR. SPEAKER.—Nothing will be recorded. ತಾವು ದಯವಿಟ್ಟು ಕಂಳಿತುಕೊಳ್ಳಿ. ಈ ರೀತಿ ಮಾಡುವುದು ಸರಿಯಲ್ಲ.

೧೧–೦೦ ಎ.ಎಂ.

ಶ್ರೀ ಯು. ಭೂಪತಿ.—ಪ್ರಾಥಮಿಕ ಶಾಲಾ ಮಕ್ಕಳಿಗೆ ಹೇಳಿದಹಾಗೆ ನಮಗೆ ನೀವು ಹೇಳುತ್ತೀರಿ.

ಅಧ್ಯಕ್ಷರು.—ಶ್ರೀನಿವಾಸ್‌ರವರೇ ತಾವು ಕೇಳಿ.

ಶ್ರೀ ಕೆ. ಪೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹಸಚಿವರು ಕೊಟ್ಟಿರತಕ್ಕಂಥ ಹೇಳಿಕೆಯಲ್ಲಿ ೯–೧೧–೧೯೮೭ರಂದು ಅಪರಾಧಿಗಳನ್ನು ಬಂಧಿಸಿದ್ದೇವೆ ಎಂದು ಹೇಳಿದ್ದಾರೆ. ಆ ತಾರೀಖು ಏಕಸ್ಮಾತ್ ಟೈಪಿಂಗ್ ಮಿಸ್ಟೇಕ್ ಆಗಿದೆಯೋ ಏನೋ ಆದ್ದರಿಂದ ಸ್ವಲ್ಪ ನೋಡಿ ಹೇಳಿದರೆ ಅನುಕೂಲವಾಗುತ್ತದೆ. ನನಗೆ ತಿಳಿದ ಮಟ್ಟಿಗೆ ದಿನಾಂಕ ೯–೧೧–೧೯೮೭ರಂದು ಘಟನೆ ನಡೆದಿರತಕ್ಕಂಥದ್ದು. ಈ ಘಟನೆ ನಡೆದು ಸಾಕಷ್ಟು ಸಮಯದ ನಂತರ ಅಪರಾಧಿಗಳನ್ನು ಬಂಧಿಸಲಾಯಿತು ಎಂದು ನನಗೆ ತಿಳಿದಿದೆ. ಕಾರಣ ನಾನು ಆ ಸ್ಥಳದವನು ಸ್ಥಳದ ಸಮಾಚಾರ ತಿಳಿದುಕೊಂಡು ಹೇಳುತ್ತಿದ್ದೇನೆ. ಈಗ ಮಾನ್ಯ ಸಚಿವರು ಹೇಳುತ್ತಿರುವುದು ವಿಚಿತ್ರವಾಗಿದೆ. ಈಗ ಪೋಲೀಸಿನವರು ಪೋಲೀಸ್ ರೆಕಾರ್ಡ್ ಸರಿ ಮಾಡಿದ್ದಾರೋ ಏನೋ ಗೊತ್ತಿಲ್ಲ. ಅಲ್ಲಿರತಕ್ಕಂಥ ಸ್ಥಳೀಯರೆಲ್ಲಾ ಹೇಳುತ್ತಾರೆ ಆ ದಿವಸ ಬಂಧಿಸಿಲ್ಲವೆಂದು. ಈ ಘಟನೆ ಅಲ್ಲಿ ಜನಜನಿತವಾಗಿದೆ. ತಾವೇ ಆ ಬಗ್ಗೆ ಆಕ್ರೋಶವನ್ನು ವ್ಯಕ್ತಪಡಿಸಿದ್ದುದು ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಆಕ್ರೋಶ ವ್ಯಕ್ತಪಡಿಸಿದ್ದುದು ಬೇರೆ ಕೇಸ್‌ನಲ್ಲಿ ಈ ಕೇಸ್‌ನಲ್ಲಿ ೯–೧೧–೧೯೮೭ರಂದೇ ಬಂಧಿಸಿ ಕೋರ್ಟಿಗೆ ಕರೆದುಕೊಂಡು ಹೋಗಿದ್ದಾರೆ. ಇದರಲ್ಲಿ ಏನಾದರೂ ವ್ಯತ್ಯಾಸವಿದ್ದರೆ ನಾನು ಇನ್‌ವೆಸ್ಟಿಗೇಟ್ ಮಾಡುತ್ತೇನೆ. ಈ ಬಗ್ಗೆ ನನಗೆ ಅನುಮಾನ ಬಂದಿದ್ದರಿಂದ ಸಿ.ಓ.ಡಿ.ಗೆ ಸಹ ರೆಫರ್ ಮಾಡಿದ್ದೇನೆ. ದಿನಾಂಕ ೩೦–೦೨–೧೯೮೭ರಂದು ಈ ಕೇಸ್ ಅನ್ನು ಸಿ.ಓ.ಡಿ.ಗೆ ರೆಫರ್ ಮಾಡಿದ್ದೇವೆ.

ಶ್ರೀ ಕೆ. ಪೆಚ್. ಶ್ರೀನಿವಾಸ್.—ಈ ಕೇಸನ್ನು ಸಿ.ಓ.ಡಿ.ಗೇನೋ ರೆಫರ್ ಮಾಡಿದ್ದೀರಿ ಆದರೇನು ಪ್ರಯೋಜನ ? ನನಗೇನೋ ಅನುಮಾನ ಇದೆ. ಇದು ಒಂದು ತರಹ ಡಸ್ಟ್‌ಬಿನ್‌ಗೆ ಹಾಕಿದ ಹಾಗೆ. ಅವರು ಇನ್‌ವೆಸ್ಟಿಗೇಶನ್ ಮಾಡುವುದಿಲ್ಲ, ಚಾರ್ಜ್‌ಶೀಟ್ ಹಾಕುವುದಿಲ್ಲ, ಈಗ ಭದ್ರಾವತಿ ಕೇಸನ್ನು ಸಿ.ಓ.ಡಿ.ಗೆ ರೆಫರ್ ಮಾಡಿ ಎಷ್ಟು ವರ್ಷಗಳಾದವು ? ಪರಿಸ್ಥಿತಿ ಏನಾಯಿತು ? ನಾನು ತಮ್ಮನ್ನು ಕೇಳುತ್ತೇನೆ ಅವರ ತಂದೆ ಶ್ರೀ ರಂಗಪ್ಪನವರು ಏನೆಂದು ದೂರು ಕೊಟ್ಟಿದ್ದಾರೆ ? ಆದರೆ ತಾವು ಇಲ್ಲಿ ಪಾರ್ಡನ್ ಸೆಕ್ಷನ್ಸ್ ಒಂದೂ ಹಾಕಿಲ್ಲ, ತಾವು ಹಾಕಿರುವ ಸೆಕ್ಷನ್ಸ್ ೩೪೮, ೩೩೬ ಹಾಕಿಕೊಂಡಿದ್ದೀರಿ. ಅವರು ಕೊಟ್ಟ ದೂರಿನಲ್ಲಿ ಏನಿದೆ ? ಮಾನ್ಯ ಅಧ್ಯಕ್ಷರೇ ಅವನು ಒಂದು ಸ್ಕಾರ್ಪರ್ ಕದ್ದ ಆಪಾದನೆ ಮೇರೆಗೆ ಮಂಡಲ್ ಪಂಚಾಯಿತಿ ಆಫೀಸ್‌ನಲ್ಲಿ ತಂದು ಕೂಡಿ ಹಾಕಿದ್ದಾಗ ನೇಣು ಹಾಕಿಕೊಂಡು ಸತ್ತಿದ್ದಾನೆಂದು ಮಾಡಿದ್ದೀರಿ. ಆ ಊರಿನಲ್ಲಿ ನಾಯಕ ಜನಾಂಗದ ೧೦ ಮನೆಗಳು ಇವೆ ಆ

---

xxx Not recorded as ordered by the chair.

ಮನೆಗಳವರ ಮೇಲೆ ದಾಂಧಲೇ ಮಾಡಿದ್ದಾರೆ. ಹೆಣ್ಣು ಮಕ್ಕಳು ಮೇಲೂ ದಾಂದಲೇ ಮಾಡಿದ್ದಾರೆ. ಅವರಲ್ಲಿ ಕೆಲವರು ಇನ್ನೂ ಚಿನ್ನಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯಂನ್ನು ಪಡೆಯುತ್ತಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಮಾನ್ಯ ಸದಸ್ಯರು ಗಮನ ಸೆಳೆಯುವ ಸೂಚನೆ ತಂದಿದ್ದಾರೆ. ಆ ಬಗ್ಗೆ ನಾನು ಸಹ ವಿವರಣೆಯನ್ನು ಕೊಟ್ಟು ಹೇಳಿದ್ದೇನೆ. ಅದಕ್ಕೆ ಸೀಮಿತವಾಗಿ ಏನಾದರೂ ಇದ್ದರೆ ಮಾತನಾಡಲಿ. ಈ ಸದನವನ್ನು ದುರುಪಯೋಗ ಪಡಿಸಿಕೊಳ್ಳುವುದು ಬೇಡ. ಇದು ಗಮನ ಸೆಳೆಯುವ ಸೂಚನೆಗೆ ಸೀಮಿತವಾಗಿರ ಬೇಕು ? ಇಲ್ಲಿ ಭಾಷಣ ಮಾಡುವುದಕ್ಕೆ ಅವಕಾಶ ಇಲ್ಲ. ಈ ವಿಷಯವನ್ನು ನಾನು ಸಿ.ಒ.ಡಿ.ಗೆ ರೆಫರ್ ಮಾಡಿದ್ದೇನೆಂದು ಹೇಳಿದ್ದೇನೆ. ಅದನ್ನು ನಂಬುವುದಿಲ್ಲವೆಂದರೆ ಇನ್ನೇನು ನಾನು ದೇವರನ್ನು ಕರೆದುಕೊಂಡು ಬಂದು ಇನ್‌ವೆಸ್ಟಿಗೇಷನ್ ಮಾಡಿಸುವುದಕ್ಕೆ ಆಗುತ್ತದೆಯೇ ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆ ಬಗ್ಗೆ ವಿವರಣೆ ಏನಾದರೂ ಇದ್ದರೆ ಕೇಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಮಂತ್ರಿಗಳು ಕೊಟ್ಟ ಉತ್ತರವನ್ನು ಕೇಳಿ ಸುಮ್ಮನೆ ಕುಳಿತುಕೊಂಡು ಹೋಗಬೇಕೇನು ?

ಅಧ್ಯಕ್ಷರು.—ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇನೆಂದು ಹೇಳುತ್ತಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಸಿ.ಒ.ಡಿ.ಗೆ ರೆಫರ್ ಮಾಡಿದ್ದೇನೆಂದು ಹೇಳಿದರೂ ಸಹ ಅದನ್ನು ಕೇಳುವುದಕ್ಕೆ ತಯಾರಿಲ್ಲವೆಂದರೆ ಹೇಗೆ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಾವು ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ ನಾನು ಮಾತನಾಡುತ್ತಿದ್ದೇನೆ. ಅವರ ಕೃಪೆಯಿಂದ ನಾನೇನು ಮಾತನಾಡುತ್ತಿಲ್ಲ. ಇದನ್ನು ದಯಮಾಡಿ ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ನನ್ನ ಕೃಪೆ ನಿಮಗೆ ಬೇಕಾಗಿದ್ದರೆ ನಾನು ನಿಮ್ಮನ್ನು ಒಳಗೆ ಬಿಡುತ್ತಿರಲಿಲ್ಲ. You are a member of this House and you have got every right to speak. My only humble request is you should confine to this call attention.

SRI K. H. SRINIVAS.—Mr Speaker is there to decide whether I am speaking relevant or irrelevant.

SRI R. L. JALAPPA.—It is not relevant to the call attention.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ನಾನು ಇವಲಿವೆನ್ಸಿಯಾಗಿ ಏನನ್ನೂ ಮಾತನಾಡುತ್ತಿಲ್ಲ. ರಿಲಿವೆನ್ಸಿ ಇರುವುದನ್ನು ಮಾತ್ರ ಹೇಳುತ್ತಿದ್ದೇನೆ. ನಾನು ಕೇಳುವಂಥದ್ದಕ್ಕೆ ಉತ್ತರ ಕೊಡಿ ಸಾಕು. ಅದಕ್ಕೆ ಅಷ್ಟು ಭಯ ನಿಮಗೇತಕ್ಕೆ ?

ಶ್ರೀ ಆರ್. ಎಲ್. ಜಾಲಪ್ಪ.—ನಾನೇತಕ್ಕೆ ನಿಮಗೆ ಭಯ ಪಡಬೇಕು, ನೀವೇನು ರಾಕ್ಷಸರೇ ? ನೀವು ನನ್ನಂತೆ ಮನುಷ್ಯರು ಸ್ವಾಮಿ. ನಾನು ಕಾನೂನು ಪ್ರಕಾರ ಕೆಲಸ ಮಾಡಿದ್ದೇನೆ. ಸಿ.ಒ.ಡಿ.ಗೆ ರೆಫರ್ ಮಾಡಿದ್ದೇನೆ. ಇನ್ನೇನು ಬ್ರಹ್ಮನಿಗೆ ಇದನ್ನು ಕಳುಹಿಸಲೇ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಕಾನೂನು ಪ್ರಕಾರ ಕೆಲಸ ಮಾಡಿದರೂ ನಂಬಿಕೆ ಬರುವಂತಿರ ಬೇಕು. That is the cardinal principle of jurisprudence

ಶ್ರೀ ಆರ್. ಎಲ್. ಜಾಲಪ್ಪ.—ಮಾಲಗಿರುವವರನ್ನು ಎಬ್ಬಿಸಬಹುದು, ಆದರೆ ಸುಮ್ಮನೆ ನಿದ್ದೆ ಮಾಡುವವರಂತೆ ನಟಿಸುವವರನ್ನು ಎಬ್ಬಿಸುವುದಕ್ಕೆ ಆಗುವುದಿಲ್ಲವಂತೆ. ಸಮಯಕ್ಕೆ ಸರಿಯಾಗಿ ಆಕ್ಷನ್ ತೆಗೆದುಕೊಂಡಿರುವುದು ನಿಮಗೆ ಗೊತ್ತಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನನ್ನ ಎರಡು ಕ್ಲಾರಿಫಿಕೇಶನ್‌ಗಳಿಗೆ ಉತ್ತರ ಕೊಡಲು ನಿಮಗೆ ಭಯವೇತಕ್ಕೆ ? ಎರಡು ಕ್ಲಾರಿಫಿಕೇಷನ್ ಕೊಡುವುದರಲ್ಲಿ ನಿಮಗೆ ಏಕೆ ಭಯ ?

ಶ್ರೀ ಆರ್. ಎಲ್. ಜಾಲಪ್ಪ.—ನಾನು ಏಕೆ ಭಯಪಡಲಿ ?

ಅಧ್ಯಕ್ಷರು.—ಸಮಾಧಾನವಾಗಿ ಕೇಳಿರಿ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಮಂತ್ರಿಗಳು ಸ್ವಲ್ಪ ಸಮಾಧಾನವಾಗಿ ಕೇಳಲಿಕ್ಕೆ ಪ್ರಯತ್ನ ಮಾಡಬೇಕು. ಮಂತ್ರಿಗಳು ಸಮಾಧಾನವಾಗಿ ಕೇಳಿದರೆ ಎಲ್ಲಾ ಸರಿಹೋಗುತ್ತದೆ. ಮಾತಿಗೆ ಮಾತು ಬೆಳೆಸಿದರೆ ಅಂದು ಸರಿ ಇರುವುದಿಲ್ಲ ಸದಸ್ಯರು ಕೇಳುತ್ತಾರೆ. ಅದನ್ನು ಮಾನ್ಯ ಮಂತ್ರಿಗಳು ಸಾವಧಾನವಾಗಿ ಕೇಳುವುದಕ್ಕೆ ಪ್ರಯತ್ನ ಮಾಡಬೇಕು.

(ಗೊಂದಲ)

ಶ್ರೀ ಕೆ.ಎಚ್. ಶ್ರೀನಿವಾಸ್.—ಸತ್ತವನ ಕುಟುಂಬದವರು ಹಾಗೂ ಅಲ್ಲಿನ ಜನಗಳು, ಅವನನ್ನು ಮಂಡಲ ಪಂಚಾಯತ್ ಆಫೀಸ್‌ನಲ್ಲಿ ಕೂಡಿ ಹಾಕಿ ರಾತ್ರಿಯೆಲ್ಲಾ ಹೊಡೆದಿದ್ದಾರೆ. ಎಂದು ಆಪಾದನೆ ಮಾಡಿಲ್ಲವೆ? ಆಮೇಲೆ ಅವನು ನೇಣು ಹಾಕಿಕೊಂಡು ಸತ್ತಿದ್ದಾನೆಂದು ಪೋಲೀಸಿನವರು ಹೇಳುತ್ತಾರೆ. ಅವನನ್ನು ಹೊಡೆದು ಸಾಯಿಸಿದ್ದಾರೆಂದು ಅವನ ಕುಟುಂಬದವರು ದೂರು ಕೊಟ್ಟ ಮೇಲೆ ಸೆಕ್ಷನ್ ೩೦೨ರ ಮೇಲೆ ಕೇಸ್‌ನ್ನು ರಿಜಿಸ್ಟರ್ ಮಾಡಿಕೊಳ್ಳುವುದೂ ಬೇಡವೆ ?

ಶ್ರೀ ಆರ್. ಎಲ್. ಜಾಲಪ್ಪ.— ಸ್ಥಳೀಯವಾಗಿ ಏನಾದರೂ ಕಂಪ್ಲೇಂಟ್ ಕೊಡಬಹುದು, ಕಂಪ್ಲೆಂಟ್‌ನಲ್ಲಿ ಏನಾದರೂ ಕೊಡಬಹುದು. ಕಂಪ್ಲೇಂಟ್ ಕೊಟ್ಟ ಮೇಲೆ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಮೆಡಿಕಲ್ ಸರ್ಟಿಫಿಕೇಟ್ ಇದೆ ಪೋಸ್ಟ್‌ಮಾರ್ಟಮ್ ಸರ್ಟಿಫಿಕೇಟ್ ಇದೆ. ಆಪಾದಿತರನ್ನು ಅರೆಸ್ಟ್‌ಮಾಡಿ ಕೋರ್ಟ್ ಮುಂದೆ ಪ್ರೊಡ್ಯೂಸ್ ಮಾಡಿ ಈಗ ಬಿಟ್ಟಿದ್ದೇವೆ. ಈ ಕೇಸ್‌ನ್ನು ಸಿ.ಓ.ಡಿ.ಗೆ ರೆಫರ್ ಮಾಡಿದ್ದೇವೆ. ಇದರ ಮೇಲೆ ನಾವು ಕಾದು ನೋಡೋಣ.

ಶ್ರೀ ಕೆ. ಎಚ್. ಶ್ರೀನಿವಾಸ್ —ಅಸ್ವಾಭಾವಿಕ ಸಾವು ಎಂದು ಎಲ್ಲಾ ಜನರು ತೀರ್ಮಾನಕ್ಕೆ ಬಂದಿದ್ದಾರೆ. ಆದೂ ಅಲ್ಲದೆ ಅವರ ಅಪ್ಪನೇ ಇದು ಅಸ್ವಾಭಾವಿಕ ಸಾವು ಎಂದು ಕಂಪ್ಲೇಂಟ್ ಕೊಟ್ಟಿದ್ದಾನೆ. ನನ್ನ ಮಗನನ್ನು ಮಂಡಲ ಪಂಚಾಯಿತಿ ಆಫೀಸ್‌ನಲ್ಲಿ ಕೂಡಿ ಹಾಕಿ ಚೆನ್ನಾಗಿ ಹೊಡೆದು ಸಾಯಿಸಿದ್ದಾರೆಂದು ದೂರು ಕೊಟ್ಟ ಮೇಲೆ ಪೋಲೀಸ್‌ನವರು ಸೆಕ್ಷನ್ ೩೦೨ರ ಮೇಲೆ ಕೇಸ್‌ನ್ನು ರಿಜಿಸ್ಟರ್ ಮಾಡಿಕೊಳ್ಳಬೇಕು. ಅದು ಸರ್ಕಾರದ ಕರ್ತವ್ಯ. ಆಪಾದಿತರನ್ನು ರಕ್ಷಣೆ ಮಾಡುವುದಕ್ಕಾಗಿ ಕೇಸ್‌ನ್ನು ರಿಜಿಸ್ಟರ್ ಮಾಡಿಲ್ಲವೆಂದು ನಾನು ಈಗ ನೇರವಾಗಿ ಆಪಾದನೆ ಮಾಡಬೇಕಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾಡಿಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಮಂತ್ರಿಗಳಾದವರು ಇಷ್ಟು ಲಘುವಾಗಿ ತೆಗೆದು ಕೊಂಡರೆ ಹೇಗೆ ?

ಶ್ರೀ ಕೆ. ಹೆಚ್. ಶ್ರೀನಿವಾಸ್.— ಇಷ್ಟು ಲಘುವಾಗಿ ಮಾತನಾಡುವಾಗ ನೀವು ಜನರನ್ನು ಹೇಗೆ ರಕ್ಷಣೆ ಮಾಡುತ್ತೀರಿ ?

ಅಧ್ಯಕ್ಷರು.— ತಾವು ಗೃಹ ಮಂತ್ರಿಯಾಗಿದ್ದೀರಿ. ತಾವು ತಂಬಿದ ಹಾಗೆ ಇರಬೇಕು.

ಶ್ರೀ ಆರ್. ಎಲ್. ಜಾಲಪ್ಪ.— ಮೊದಲು ಕೊಟ್ಟ ಕಂಪ್ಲೇಂಟ್‌ನಲ್ಲಿ ಮರ್ಡರ್ ಆಗಿದೆಯೆಂದೂ ಹೇಳಿಲ್ಲವೆಂದು ನಮ್ಮ ಅಧಿಕಾರಿಗಳು ಬರೆದು ಕಳುಹಿಸಿದ್ದಾರೆ. ಈಗ ಮಾನ್ಯ ಸದಸ್ಯರು ಆ ಕಂಪೆಂಟ್‌ನಲ್ಲಿ ಮರ್ಡರ್ ಆಗಿದೆ ಎಂದು ದೂರು ಕೊಡಲಾಗಿದೆಯೆಂದು ಹೇಳುತ್ತಿದ್ದಾರೆ. ಈ ಕೇಸನ್ನು ಸಿ.ಓ.ಡಿ.ಗೆ ರೆಫರ್ ಮಾಡಲಾಗಿದೆ. ಅದಕ್ಕಿಂತ ಇನ್ನೇನು ಮಾಡುವುದಕ್ಕೆ ಆಗುತ್ತದೆ ?

ಶ್ರೀ ಕೆ. ಎಚ್. ಶ್ರೀನಿವಾಸ್.— ಸತ್ತವನ ಅಪ್ಪ ಕೊಟ್ಟಿರುವ ಮೊದಲನೆಯ ಕಂಪ್ಲೇಂಟ್‌ನಲ್ಲಿ ಏನು ಇದೆ ಎಂಬುದನ್ನು ಹೇಳಿ, ಪೋಲೀಸಿನವರು ಕೊಡುವ ಉತ್ತರವನ್ನು ನೀವು ನಮಗೆ ಹೇಳಿದರೆ ಹೇಗೆ ? ಅಲ್ಲಿ ಏನಾದೆ ಎಂಬುದನ್ನು ನೀವು ತಿಳಿದುಕೊಳ್ಳಬೇಕು. ಪೋಲೀಸಿನವರು ಬೊಗಳೆ ಹೊಡೆದ ಹಾಗೆ ನೀವು ಹೊಡೆಯುವುದು ಸರಿಯಲ್ಲ.

ಶ್ರೀ ಆರ್. ಎಲ್. ಜಾಲಪ್ಪ.— ಬೊಗಳೆ ಹೊಡೆಯುವುದು ಎಂದು ಹೇಳಬಾರದು. ಕ್ರಾಸ್ ಎಕ್ಸಾಮಿನ್ ಮಾಡುವುದಕ್ಕೆ ಇದು ಕೋರ್ಟ್ ಅಲ್ಲ. It is not possible the cross Examine here.

SRI K. H. SRINIVAS.— You should have some sense of responsibility. You are answerable to this House. ಮಾನ್ಯ ಅಧ್ಯಕ್ಷರೇ ನಾನು ನೇರವಾಗಿ ಆಪಾದನೆ ಮಾಡುತ್ತೇನೆ. ಇವರು ಮಂಡಲ ಪಂಚಾಯಿತಿ ಪ್ರಧಾನ ಆದವರಿಗೆ ರಕ್ಷಣೆ ಮಾಡುವುದ ಕ್ಕೋಸ್ಕರ ತಮ್ಮ ಜವಾಬ್ದಾರಿಯಿಂದ ನುಣಚಿಕೊಳ್ಳುತ್ತಿದ್ದಾರೆ. ನೀವು ಈ ಸ್ಥಾನದಲ್ಲಿ ಇರುವುದಕ್ಕೆ ಅರ್ಹತೆ ಇಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಜೆ. ಎಚ್. ಪಟೇಲ್.— ಈ ಸದನಲ್ಲಿ ಮಾನ್ಯ ಸದಸ್ಯರುಗಳಿಗೆ ಚರ್ಚೆ ಮಾಡುವುದಕ್ಕೆ ಹಕ್ಕು ಇದೆ. ಏನು ಬೇಕಾದರೂ ಮಾಡಬಹುದು. ನಾನು ಮಾನ್ಯರು ಹೇಳಿದ್ದನ್ನು ಉಗ್ರವಾಗಿ ತೆಗೆದುಕೊಳ್ಳುವುದಿಲ್ಲ. ಇಲ್ಲಿ ಏನು ಬೇಕಾದರೂ ಚಾರ್ಜಸ್ ಮಾಡಬಹುದು, ಆದರೆ ಹಾಗೆ ಮಾಡಿದ ಚಾರ್ಜಸ್‌ಗಳಲ್ಲಿ, ನಾಲಾಯಂಕ್ ಯಾರು ಎಂಬುದನ್ನು ಜನರು ಡಿಸೈಡ್ ಮಾಡುತ್ತಾರೆ. ಆದರೆ ಯಾರೂ ಇಂತಹ ಭಾಷೆಯನ್ನು ಉಪಯೋಗಿಸುವುದು ಬೇಡ ಎಂದು ನನ್ನ ವಿನಂತಿ.

ಶ್ರೀ ಕೆ. ಎಚ್. ಶ್ರೀನಿವಾಸ್.— ಆ ಬಗ್ಗೆ ಒಂದು ಸದನದ ಸಮಿತಿಯನ್ನು ನೇಮಿಸಿ. ಅವರಂ ಸ್ಥಳಕ್ಕೆ ಭೇಟಿ ನೀಡಿ ವಿಚಾರವನ್ನು ತಿಳಿದುಕೊಂಡು ಬರಲಿ.

ಅಧ್ಯಕ್ಷರು.— ಮಾನ್ಯ ಶ್ರೀನಿವಾಸ್‌ರವರೇ, ದಯವಿಟ್ಟು ನೀವು ಕುಳಿತುಕೊಳ್ಳಿ ಬೇಕಂ. ಮಾನ್ಯ ಕೆ. ಹೆಚ್ ಪಾಟೀಲ್‌ರವರಂ ತಮ್ಮ ಸೂಚನೆಯಂನ್ನು ಕೇಳಿ...

ಶ್ರೀ ಎಂ. ವಂಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ಮಾನ್ಯ ಕೆ. ಎಚ್. ಶ್ರೀನಿವಾಸ್‌ರವರಿ ಒಂದು ಸದನದ ಸಮಿತಿಯನ್ನು ನೇಮಕ ಮಾಡಿ ಸ್ಥಳಕ್ಕೆ ಕಳುಹಿಸಿಕೊಡಿ. ನಾನು ಚಾರ್ಜಸ್ ಪ್ರೂವ್ ಮಾಡದೇ ಹೋದರೆ ಎಂ. ಎಲ್. ಎ. ಸ್ಥಾನಕ್ಕೆ ರಿಸೈನ್ ಮಾಡುತ್ತೇನೆ ಎಂದು ಹೇಳುತ್ತಾರೆ...

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.— ಎಲ್ಲರೂ ಬುದ್ಧಿವಂತರು, ಎಲ್ಲರೂ ಅಡ್ವೋಕೇಟ್ಸ್...

ಅಧ್ಯಕ್ಷರು — ದಯವಾಡಿ ಎಲ್ಲರೂ ಕುಳಿತುಕೊಳ್ಳಿ. ಕೆ. ಹೆಚ್. ಪಾಟೀಲ್‌ರವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಹೇಳಿ, ಮಾನ್ಯ ಸಹಕಾರ ಸಚಿವರು ತಮ್ಮ ಹೇಳಿಕೆಯನ್ನು ಕೊಡಿ.

ಗಮನ ಸೆಳೆಯುವ ಸೂಚನೆ

ಗದಗ ಜಿಲ್ಲೆಯಂ ಹೊಂಬಾಳಿಯೆಂಲ್ಲಿ ಗದಗ ಸಹಕಾರ ಹತ್ತಿ ಮಾರಾಟ ಸಂಘದ ಶಾಖೆಯನ್ನು ಪ್ರಾರಂಭಿಸುವ ಬಗ್ಗೆ

ಶ್ರೀ ಕೆ. ಹೆಚ್. ಪಾಟೀಲ್.— ಗದಗ್ ಜಿಲ್ಲೆಯ ಹೊಂಬಾಳೆ ತಾಲ್ಲೂಕಿನಲ್ಲಿ ಗದಗ್ ಸಹಕಾರ ಹತ್ತಿ ಮಾರಾಟ ಸಂಘದ ಶಾಖೆಯನ್ನು ಪ್ರಾರಂಭಿಸುವ ಬಗ್ಗೆ ಸಹಕಾರ ಮಂತ್ರಿಯವರ ಗಮನವನ್ನು ಸೆಳೆಯಂತ್ತೇನೆ.

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಸಚಿವರು).— ೧೯೮೬—೮೭ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರೀಯ ಬೇಳೆ ಕಾಳುಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ (ಎನ್.ಡಿ.ಡಿ.ಪಿ) ಸಹಕಾರ ಕ್ಷೇತ್ರದಲ್ಲಿ ಬೇಳೆ ಗಿರಣಿಗಳನ್ನು ಸ್ಥಾಪಿಸಲು ಒಂದು ಯೋಜನೆಯನ್ನು ಈ ಕೆಳಕಂಡ ಮಾದರಿಯಲ್ಲಿ ಧನ ಸಹಾಯವನ್ನು ನಿರೂಪಿಸಲಾಗಿತ್ತು.—

ಯೋಜನೆಯ ವೆಚ್ಚದಲ್ಲಿ ಶೇಕಡ ೬೫ ಭಾಗ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದಿಂದ ಸಾಲದ ರೂಪವಾಗಿಯೂ, ಶೇಕಡ ೨೬ ಭಾಗ ಸಬ್ಸಿಡಿ ರೂಪದಲ್ಲಿಯೂ, ರಾಜ್ಯದ ಕೃಷಿ ಇಲಾಖೆಯ ಪಂಖಾಂತರ (ಅದರಲ್ಲಿ ಅರ್ಧ ಭಾಗ ರಾಜ್ಯ ಸರ್ಕಾರದಿಂದಲೂ, ಉಳಿದರ್ಧ ಭಾಗ ಕೇಂದ್ರ ಸರ್ಕಾರ ದಿಂದಲೂ ಕೂಡಿಸಿ) ಹಾಗೂ ಶೇಕಡ ೯ ಭಾಗ ಸಂಘದ ವತಿಯಿಂದಲೂ ಭರಿಸುವಂತೆ ನಿರೂಪಿಸ ಲಾಗಿತ್ತು.